ಇಷ್ಟವಿರಲಿಲ್ಲ. ಅಗ್ಗಕ್ಕೆ ಸಿಗುವ ಪ್ರದೇಶದಲ್ಲಿ ಸ್ಥಿತವಾದ ಆ ಮಂದ ಬೆಳಕಿನ ಅಂಗಡಿಗಳಲ್ಲಿ ಸರಕು ಕೊಳ್ಳುವುದು ಎಂದೂ ಖುಶಿ ಕೊಡುವ ಅನುಭವವಾಗಿರಲಿಲ್ಲ. ಕೆಟ್ಟ ಧ್ವನಿ ತರಂಗಗಳಲ್ಲಿ ಗಟ್ಟಿಯಾಗಿ ಕೆಟ್ಟ ಸಂಗೀತ ಹರಿಸುವ ಈ ಅಂಗಡಿಗಳಿಗೆ ಇಂಡಿಯನ್ ಸ್ಟೋರ್ ತಾನೇ ಎಂದು ಕೊಂಡು ಹೇಗೆ ಹೇಗೋ ಬರುವ ಭಾರತೀಯರು ಒಳಗೆ ಎಲ್ಲ ತಿರುವು ಮುರುವುಗಳಲ್ಲಿ, ಫ್ರೀಜರ್ ಬಾಗಿಲೆದುರು ಎದುರಾಗುತ್ತಿರುತ್ತಾರೆ. ಗೂಗಲ್‌ನಲ್ಲಿ ಅರಸಿ, ಪೂಜೆಗೆ ಏನೇನು ಬೇಕೆಂದು ಪಟ್ಟಿ ಮಾಡಿ ಕೊಂಡಿದ್ದಳು, ದೀಪಾ. ಅವರು ತರಲಿರುವ ಆ ಮೂರ್ತಿಯಲ್ಲಿ ಆ ಮಹಾಭಾರತದ ಲಿಪಿಕಾರನನ್ನು ಆವಾಹಿಸಲು ಬೇಕಾದ ಪೂಜಾ ಸಾಮಗ್ರಿಗಳ ಸಣ್ಣ ದೊಡ್ಡ ವಿಧ ವಿಧ ಪಟ್ಟಿಯೇ ಅಲ್ಲಿತ್ತು. ಪೂಜೆಯ ಬಳಿಕ ಸುಲಭದಲ್ಲಿ ವಿಸರ್ಜಿಸಲಾಗುವಂತಾಗಲು ಯಾವ ಪರಿಸರ ಸ್ನೇಹಿ ಗಣಪನನ್ನು ತರಬೇಕೆಂಬುದರ ಬಗ್ಗೆಯೂ ಅವಳು ಗುರುತು ಮಾಡಿಕೊಂಡಿದ್ದಳು.

"ಯಾವ ಉಷ್ಣತೆಯಲ್ಲೂ ನೀರಲ್ಲಿ ಕರಗಿ ಪರಿಸರದೊಡನೆ ಒಂದಾಗುವುದು ಖಂಡಿತ" ಎಂದು ಒಂದು ವಿಗ್ರಹದ ಕಟ್ಟಿನ ಮೇಲೆ ದೊಡ್ಡ ಅಕ್ಷರಗಳಲ್ಲಿ ಬರೆದಿತ್ತು. ಮಾರಾಟ ಚಾಕಚಕ್ಯತೆಯಷ್ಟೇ, ಎಂದಂದು ಕೊಂಡ, ಮಿನಿಸೋಟಾದ ಹವಾಮಾನ ಗುಣವನ್ನರಿತಿದ್ದ ಸುನಿಲ್! ಕರ್ಪೂರ, ಅಡಿಕೆ, ಮಾವಿನೆಲೆ, ಅಗರಬತ್ತಿ, ಪುಟ್ಟ ಹಣತೆಗಳು, ಬತ್ತಿಗಳು, ಶೈತ್ಯೀಕೃತ ತರಕಾರಿಗಳು ಎಲ್ಲವೂ ಗಣಪನ ಮೂರ್ತಿಯೊಡನೆ ಲೆಕ್ಕದ ಕೌಂಟರ್‌ಗೆ ಬಂದು ನಿಂತವು.

"34 ಡಾಲರ್, 56 ಸೆಂಟ್ಸ್," ಮಿಸ್ಟರ್ ಪಟೇಲ್‌ರ ಹೋತದ ಗಡ್ಡದ ಮಗ, ಸಾರಿ ಬಿಟ್ಟ. ಅವನು ಕೆರಿಬಿಯನ್ ಮೂಲದವನಿರಬಹುದೇ ಎಂಬ ನಿಷ್ಕಾರಣ ಪ್ರಶ್ನೆ ಸುನಿಲ್‌ನ ಮನದಲ್ಲಿ ಉದಿಸಿತು. ತನ್ನ ಮಗನೇ ಬೆಳೆದಾಗ ಹೀಗೆ ಗಡ್ಡ, ಮೀಸೆ ಬೆಳೆಸಿದರೆ, ಎಂಬ ಪ್ರಶ್ನೆ ಮನದಲ್ಲಿ ಸುಳಿದು ಅವನು ನಡುಗಿದ. ಬಂಡಿ ಅಲ್ಲಿಗೆ ತಲುಪಿದಾಗ ಆ ಬಗ್ಗೆ ಯೋಚಿಸಿದರಾಯ್ತು, ಎಂದುಕೊಂಡನವ. ತನ್ನ ಅಪ್ರತಿಮ ಹಾಸ್ಯಪ್ರಜ್ಞೆಗೆ ತಾನೇ ನಗುತ್ತಾ ಅವನು ಆ ಯೋಚನೆಯನ್ನು ಮನದ ಮೂಲೆಗೆ, ಅಲ್ಲಿರುವ ಯೋಚನೆಗಳ ರಾಶಿಗೆ ತಳ್ಳಿದ.

"ವಿಸರ್ಜನೆಯ ದಿನ ನಾನು ನೆರೆಯವರೆಲ್ಲರನ್ನೂ ಕರೆಯುತ್ತೇನೆ," ಕಾರಿನಲ್ಲಿ ಕುಳಿತಾಗ ದೀಪಾ ನುಡಿದಳು.

"ಆಗಲಿ, ಅಡ್ಡಿಯಿಲ್ಲ," ಸುನಿಲ್ ಉತ್ತರಿಸಿದ.

"ಹಗಲಲ್ಲೇ ನಾವೇ ಪೂಜೆ ಮಾಡಿ ಮುಗಿಸುವ. ಮಂತ್ರಗಳನ್ನೆಲ್ಲ ಆ ಸಾವಿರಾರು ಜಾಲತಾಣಗಳಲ್ಲಿ ಹುಡುಕಿ ನೀನೇ ಇಳಿಸಿ ಕೊಡುವೆಯಾ? ಉಳಿದುದನ್ನೆಲ್ಲಾ ನಾನೇ ಮಾಡುವಾಗ ಇಷ್ಟಾದರೂ ನಿನ್ನಿಂದಾಗಲಿ."

"ಖಂಡಿತ!" ಮನೆಯ ಒಡೆಯನಾಗಿದ್ದೂ ಎಲ್ಲವನ್ನೂ ಕಳಕೊಂಡಂತಹ ಭಾವದಲ್ಲಿ ಅವನಂದ.

ಪೂಜೆಗೆ ಬೇಕಾದ ಮಂತ್ರಗಳನ್ನರಸುವುದರಲ್ಲಿ ಸುನಿಲ್ ವ್ಯಸ್ತನಾದ. ಬೇಕಿರುವುದೇನೆಂದು ತಿಳಿಸಲಾಗಿತ್ತು. ದೀರ್ಘವಿರಬಾರದು, ಆದರೆ ಸ್ಪಷ್ಟವಾಗಿ ತಿಳಿಯುವಂತಿರಬೇಕು; ಕೆಳಗೆ ಕುಳಿತು ಪೂಜೆ ಮಾಡುವವನು ಸರಿಯಾಗಿ ಕೇಳಿಸಿಕೊಂಡು ಪುನರುಚ್ಚರಿಸುವಂತೆ ನಿಧಾನವಾಗಿ ಪಠಿಸಲ್ಪಡಬೇಕು. ಅನನುಭವಿ ಹುಡುಗರು ಯೂಟ್ಯೂಬ್‌ನಲ್ಲಿ ಒಟ್ಟಾರೆ ಪೇರಿಸಿಟ್ಟುದು ನಿಜಕ್ಕೂ ಗೊಂದಲಕ್ಕೀಡು ಮಾಡುತ್ತಿತ್ತು. ಅವರೇನು ತಮ್ಮನ್ನು ಭಾವೀ ಗುಲ್ಶನ್ ಕುಮಾರ್ ಎಂದುಕೊಂಡಿರುವರೇ? ಆರಂಭದಲ್ಲಿ ಭಜನೆಗಳ ಗಾಯಕನಾಗಿದ್ದು, ಚಿತ್ರ ಸಂಗೀತ ಜಗತ್ತಿನ ಅಧಿಪತಿಯಾದ ಆತ, ಆ ಸ್ಥಾನಕ್ಕಾಗಿಯೇ ಭೂಗತ ಜಗತ್ತಿನ ಗುಂಡೇಟಿಗೆ ಬಲಿಯಾಗಿದ್ದ!